ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಬೆಂಗಳೂರು ನಗರ ಹೊರತು ರಾಜ್ಯದ ಇತರೆ ಜಿಲ್ಲೆಗಳ ಸರ್ಕಾರಿ ಶಾಲಾ ಕಟ್ಟಡಗಳನ್ನು ೧೯೮೭-೮೮ನೇ ಆರ್ಥಿಕ ಸಾಲಿನಿಂದ ಜಿಲ್ಲಾಪರಿಷತ್ತುಗಳ ಆಡಳಿತ ವ್ಯಾಪ್ತಿಗೆ ವಹಿಸಿದೆ. ಪ್ರತಿಯೊಂದು ಸಾಲಿನ ಮುಂಗಡ ಪತ್ರದಲ್ಲೂ ಶಾಲಾ ಕಟ್ಟಡಗಳ ದುರಸ್ತಿ ಮತ್ತು ನಿರ್ಮಾಣಕ್ಕಾಗಿ ಹಣ ಒದಗಿಸಲಾಗುತ್ತಿದೆ.

ಆ) ಈಗಾಗಲೇ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯೊಂದಿಗೆ ವ್ಯವಹರಿಸುತ್ತಿದ್ದು, ಪುರಸಭೆ ಮಿತಿಯಲ್ಲಿರುವ ಶಾಲಾಕಟ್ಟಡಗಳೂ ಸಂಬಂದಿಸಿದ ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಗೆ ಬಳಪಟ್ಟಿರುವುದನ್ನು ಸ್ಪಷ್ಟಪಡಿಸಲು ಅಧಿಸೂಚನೆ ಹೊರಡಿಸಲು ಕ್ರಮ ಜರುಗಿಸಲಾಗುತ್ತಿದೆ.

ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ದಿನಗೂಲಿ ನೌಕರರ ಬಗ್ಗೆ

೧೫೬೫ (೨೧೭೪) ಶ್ರೀ ಯು. ಭೂಪತಿ (ಸಂಡೂರು) ಮಾನ್ಯ ನಗರಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ರಾಜ್ಯದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ನಂತರ ಸರ್ಕಾರವು ಖಾಯಂಗೊಳಿಸಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ?

ಆ) ಸದರಿ ದಿನಗೂಲಿಗಳಿಗೆ ನಿಗದಿ ಮಾಡಿರುವ ವೇತನ ಎಷ್ಟು ? ಈ ವೇತನ ನಿಗಧಿಗೆ ಆಧಾರಗಳೇನು ?

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಸಚಿವರು).—

ಅ) ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ದಿನಗೂಲಿ ನೌಕರರು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ ಅಂತಿಮ ತೀರ್ಪು ಬಂದಿಲ್ಲವಾದ್ದರಿಂದ ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗಾಗಿ ಕಾಯಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಣ್ಣೆತೊರೆ ಹಾಗೂ ಅಮರ್ಜಾ ಯೋಜನೆ ಕುರಿತು

೧೫೬೬ (೨೫೯೨) ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ (ಚಿತ್ತಾಪುರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಬರುವ ಬೆಣ್ಣೆತೊರೆ ನೀರಾವರಿ ಯೋಜನೆ ಹಾಗೂ ಅಮರ್ಜಾ ನೀರಾವರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಯಿತು. ಈ ಯೋಜನೆಗೆ ಒದಗಿಸಲಾಗುವ ಅಂದಾಜು ಹಣವೆಷ್ಟು, ಇಲ್ಲಿಯವರೆಗೆ ವಾಸ್ತವವಾಗಿ ಖರ್ಚು ಮಾಡಿದ ಹಣವೆಷ್ಟು ?

ಆ) ೧೯೮೭-೮೮ನೇ ಸಾಲಿನಲ್ಲಿ ಈ ಯೋಜನೆಗಳಿಗೆ ಒದಗಿಸಿರುವ ಹಣ ವೆಷ್ಟು ? ಸದರಿ ಯೋಜನೆಗಳಿಗೆ ಈ ವರ್ಷದಲ್ಲಿ ಬಿಡುಗಡೆ ಮಾಡಿರುವ ಹಣ ವೆಷ್ಟು ? (ತಿಂಗಳವಾರು ವಿವರ ನೀಡುವುದು)

ಇ) ೧೯೮೮-೮೯ರಲ್ಲಿ ಈ ಯೋಜನೆಗಳಿಗೆ ಒದಗಿಸಲಾದ ಹಣ ಎಷ್ಟು ? ಪೂರ್ತಿ ಹಣ ಬಿಡುಗಡೆ ಮಾಡುವಿರಾ? (ತಿಂಗಳವಾರು ವಿವರ ನೀಡುವುದು)

ಈ) ಈಮೇಲೆ ತಿಳಿಸಲಾದ ಯೋಜನೆಗಳನ್ನು ತೀವ್ರವಾಗಿ ಮುಂಗಿಸಲು ಸಮಯ ನಿಗದಿತ ಕಾರ್ಯಕ್ರಮ ವೇನಾದರೂ ಹಾಕಿಕೊಂಡಿದ್ದೀರಾ ? ಹಾಗಿದ್ದಲ್ಲಿ ಈ ಯೋಜನೆಗಳನ್ನು ಪೂರ್ತಿಗೊಳಿಸಿ ನೀರಾವರಿಗೆ ಯಾವಾಗ ಅವಕಾಶ ಮಾಡಿಕೊಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ, (ಯೋಜನಾ, ಕಂದಾಯ. ಮತ್ತು ನೀರಾವರಿ ಮಂತ್ರಿಗಳು).—